# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಾಲಕರ ಪ್ರೌಢಶಾಲೆ ಶ್ರೀರಾಮಪುರ (ಪಿಟ್ ಕಾಲೋನಿ) ಬೆಂಗಳೂರು –2

**ವಿಷಯ :** ಪಾಲಿಕೆಯ ವೆಬ್‌ಸೈಟ್‌ನಲ್ಲಿ ಮಾಹಿತಿ ಪ್ರಕಟಿಸುವ ಕುರಿತು
**ಉಲ್ಲೇಖ:** ಜಂಟಿ ಆಯುಕ್ತರ ಕಛೇರಿಯ ಸಂಖ್ಯೆ ಜಂ.ಆ(ಪ)ಜಿ.ಎಲ್.1/ 1542 / 10–11 ದಿನಾಂಕ 2.08.2010

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಈ ಶಾಲೆಯ ವಿವರಗಳು ಈ ಕೆಳಕಂಡಂತಿವೆ.

1) ಬಿ.ಬಿ.ಎಂ.ಪಿ. ಬಾಲಕರ ಪ್ರೌಢಶಾಲೆ ಶ್ರೀರಾಮಪುರ (ಪಿಟ್ ಕಾಲೋನಿ), ಬೆಂಗಳೂರು, ಈ ಶಾಲೆಯು 1971 ರಲ್ಲಿ ಪ್ರಾರಂಭಗೊಂಡಿದೆ ಇಲ್ಲಿ 8, 9, 10ನೇ ತರಗತಿಗಳು ಕನ್ನಡ ಮಾಧ್ಯಮದಲ್ಲಿರುತ್ತವೆ. ಇದರ ಮುಖ್ಯ ಉದ್ದೇಶಗಳು ಸಾರ್ವಜನಿಕ ಮಕ್ಕಳಿಗೆ ಅದರಲ್ಲೂ ಬಡ ಕುಟುಂಬದ ಮಕ್ಕಳಿಗೆ ವಿದ್ಯೆಯನ್ನು ಬೋಧನೆ ಮಾಡುವುದು ಮುಖ್ಯ ಉದ್ದೇಶವಾಗಿದೆ ಮತ್ತು ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದು ಇದರ ಮುಖ್ಯವಾದ ಧ್ಯೇಯವಾಗಿದೆ.

2) ಈ ಸಂಸ್ಥೆಯ ಅಧಿಕಾರಿ ಮುಖ್ಯೋಪಾಧ್ಯಾಯರು ಇವರ ಮುಖ್ಯವಾದ ಕಾರ್ಯ ಶಾಲೆಯ ಆಡಳಿತ ಮತ್ತು ಮೇಲ್ವಿಚಾರಣೆಯ ನಿರ್ವಹಣೆ ಹಾಗೂ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಅವರ ಪ್ರಗತಿ ಬಗ್ಗೆ ಗಮನ ಹರಿಸುವುದು. ಇತರೆ ನೌಕರರ ಮೇಲೆ ನಿಯಂತ್ರಣ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ವೇತನ ವಿತರಣೆ ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರೊಂದಿಗೆ ಉತ್ತಮ ಸಂಪರ್ಕ ಉತ್ತಮ ಬೋಧನೆ ಮತ್ತು ಉತ್ತಮ ಫಲಿತಾಂಶದ ಬಗ್ಗೆ ಗಮನ ಹರಿಸುವುದು ಮುಂತಾದವು ಮುಖ್ಯೋಪಾಧ್ಯಾಯರ ಕರ್ತವ್ಯಗಳಾಗಿರುತ್ತವೆ.

ನಂತರ ನೌಕರರಲ್ಲಿ ಮೊದಲಿಗೆ

**ಶಿಕ್ಷಕರು:**

ಶಿಕ್ಷಕರಿಗಿರುವ ಮುಖ್ಯ ಅಧಿಕಾರವೆಂದರೆ ವಿದ್ಯಾರ್ಥಿಗಳ ಮೇಲೆ ನಿಯಂತ್ರಣ ಇವರ ಅಧಿಕಾರಕ್ಕಿಂತ ಇವರ ಕರ್ತವ್ಯ ಹೆಚ್ಚಾಗಿರುತ್ತವೆ.

ಇವರ ಮುಖ್ಯವಾದ ಕರ್ತವ್ಯಗಳು ತಮಗೆ ನಿಗಧಿಪಡಿಸಿರುವ ವಿಷಯಗಳನ್ನು ವೇಳಾ ಪಟ್ಟಿಯಂತೆ ನಿರ್ವಹಿಸುವುದು. ಕಾಲಕಾಲಕ್ಕೆ ಪರೀಕ್ಷೆ, ಕಿರುಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳ ಪ್ರಗತಿಯನ್ನು ನೋಡಿಕೊಳ್ಳುವುದು ಅಲ್ಲದೆ ಉತ್ತಮ ಶಿಕ್ಷಣವನ್ನು ಮಕ್ಕಳಿಗೆ ನೀಡುವುದು.

**ಗುಮಾಸ್ತರು**

ಶಾಲೆಯ ಲೆಕ್ಕಪತ್ರಗಳನ್ನು ನಿರ್ವಹಿಸುವುದು, ಸಿಬ್ಬಂದಿಯ ವೇತನ ಬಿಲ್ಲನ್ನು ತಯಾರಿಸುವುದು ಸಿಬ್ಬಂದಿಯ ಸೇವಾ ಪುಸ್ತಕ, ನಗದು ಪುಸ್ತಕ, ಸ್ಟಾಕ್ ಪುಸ್ತಕ ಮತ್ತು ಇತರ ವಹಿಗಳ ನಿರ್ವಹಣೆಯನ್ನು ನೋಡಿಕೊಳ್ಳುವುದು.

**ಪ್ರಯೋಗ ಶಾಲಾ ಸಹಾಯಕರು**

ಇವರು ಶಾಲೆಯ ವಿಜ್ಞಾನ ಶಿಕ್ಷಕರಿಗೆ ಸಹಾಯಕರಾಗಿದ್ದು ಪ್ರಯೋಗ ಶಾಲೆಯಿಂದ ವಿದ್ಯಾರ್ಥಿಗಳಿಗೆ ಬೇಕಾದ ಮತ್ತು ಶಿಕ್ಷಕರು ಸೂಚಿಸಿದ ವಸ್ತುಗಳನ್ನು ಸರಬರಾಜು ಮಾಡುವುದು ಇವರ ಕರ್ತವ್ಯವಾಗಿರುತ್ತದೆ.

**ಜವಾನರು**

ಇವರು ಶಾಲೆಯು ಪ್ರಾರಂಭವಾಗುವುದಕ್ಕೆ ಮೊದಲೇ ಶಾಲಾ ಬಾಗಿಲು ಮತ್ತು ಕಛೇರಿಯ ಬಾಗಿಲುಗಳನ್ನು ತೆಗೆದು ಕಛೇರಿ ಮತ್ತು ಶಾಲಾ ಕೊಠಡಿಗಳನ್ನು

ಸ್ವಚ್ಛಗೊಳಿಸುವುದು ಕಾಲ ಕಾಲಕಾಲಕ್ಕೆ ಅವಧಿಯ ಬೆಲ್ಲಿನ ನಿರ್ವಹಣೆ, ಬೇರೆ ಕಛೇರಿಗಳಿಗೆ ಟಪಾಲು ತಲುಪಿಸುವುದು, ಇವರ ಕರ್ತವ್ಯವಾಗಿರುತ್ತದೆ.

**<u>ಪೌರ ಕಾರ್ಮಿಕರು</u>**

ಶಾಲಾ ಆವರಣವನ್ನು ಸ್ವಚ್ಛಗೊಳಿಸುವುದು ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು ಇವರ ಕರ್ತವ್ಯವಾಗಿರುತ್ತದೆ.

ಈ ಶಾಲೆಗೆ ಮಂಜೂರಾಗಿರುವ ಹುದ್ದೆಗಳು ಮತ್ತು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಈ ಪತ್ರಕ್ಕೆ ಲಗತ್ತಿಸಿದೆ.

3) ಮೇಲ್ವಿಚಾರಣೆಯನ್ನು ಅನುಸರಿಸಲು ಶಾಲಾ ವೇಳಾ ಪಟ್ಟಿ ಕರ್ತವ್ಯ ನಿಷ್ಠೆ, ಸಮಯಪ್ರಜ್ಞೆ, ಪಾಠ ಯೋಜನೆ ನಿಯತ ಕಾಲೀಕ ಪರೀಕ್ಷೆಗಳು ಮತ್ತು ಕಿರುಪರೀಕ್ಷೆಗಳು ಮುಂತಾದವನ್ನು ಅನುಸರಿಸುತ್ತೇವೆ.

4) ಕರ್ತವ್ಯ ನಿಷ್ಟಯಿಂದ ಕೆಲಸ ನಿರ್ವಹಿಸುವುದು ಪಾಠಯೋಜನೆ ಮತ್ತು ವೇಳಾ ಪಟ್ಟಿಯನ್ನು ಪಾಲಿಸುವುದು.

5) ಕಾರ್ಯಗಳನ್ನು ನೆರವೇರಿಸಲು ಹಾಜರಾತಿ ವೇಳಾಪಟ್ಟಿ, ಪರೀಕ್ಷೆಗಳು ಕಿರುಪರೀಕ್ಷೆಗಳು, ಪಠ್ಯ ಪುಸ್ತಕಗಳು ತಾವೇ ತಯಾರಿಸಿದ ನೋಟ್ಸ್ ಪಾಠ ಯೋಜನೆ ಮುಂತಾದವು ಕೈಪಿಡಿಗಳಾಗಿರುತ್ತವೆ.

6) ನಿಯಂತ್ರಣದಲ್ಲಿರುವ ದಸ್ತಾವೇಜುಗಳು, ಹಾಜರಾತಿ ಪುಸ್ತಕಗಳು ಪ್ರವೇಶ ಪುಸ್ತಕ, ಸೇವಾ ವಹಿಗಳು, ನಗದು ಪುಸ್ತಕ, ಸ್ಟಾಕ್ ಪುಸ್ತಕ ಮುಂತಾದವುಗಳು,

7) ಕಾರ್ಯನೀತಿ ಅನುಷ್ಟಾನಕ್ಕೆ ತರಲು ಪೋಷಕರ ಸಭೆಗಳನ್ನು ಕರೆದು ಅವರ ಮಕ್ಕಳ ಪ್ರಗತಿ ಬಗ್ಗೆ ಚರ್ಚಿಸಲಾಗುವುದು. ವಿಷಯಗಳಲ್ಲಿ ಪರಿಣತಿ ಹೊಂದಿದವರನ್ನು ಕರೆಸಿ ಮಕ್ಕಳಿಗೆ ಉಪನ್ಯಾಸಕೊಡಿಸುವುದು.

೮) ಈ ಶಾಲೆಗೆ ಈ ಕ್ಷೇತ್ರದಲ್ಲಿ ನಿರ್ಮಿತವಾಗಿರುವ 'ವಾಸವಿ ಕ್ಲಬ್" ಮಲ್ಲೇಶ್ವರಂ ಈ ಸಂಸ್ಥೆಯ ಸದಸ್ಯರು ಶಾಲೆಗೆ ಅನೇಕ ಕೊಡುಗೆಗಳನ್ನು ನೀಡಿ ಮಕ್ಕಳಿಗೆ ಕೆರಿಯರ್ ಕೋಚಿಂಗ್ ನೀಡಿರುತ್ತಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದ ೩ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ಮಕ್ಕಳಿಗೆ ಹೆಚ್ಚಿನ ಅಂಕಗಳನ್ನು ಗಳಿಸಲು ಪ್ರೋತ್ಸಾಹವನ್ನು ನೀಡಿರುತ್ತಾರೆ. ಅಲ್ಲದೆ ಸಾಫ್ಟ್‌ವೇರ್ ಇಂಜಿನಿಯರು ಹೇಮಂತ್ ಎಂಬುವುದು ಸಹ ಶಾಲೆಯ ಮಕ್ಕಳಿಗೆ ಅವಶ್ಯಕವಿರುವ ವಸ್ತುಗಳನ್ನು ಕೊಡಿಗೆಯಾಗಿ ನೀಡಿ ಅವರಲ್ಲಿನ ಉತ್ತಮ ನಡವಳಿಕೆಗಳನ್ನು ಬಳಸಿಕೊಳ್ಳಲು ಸಲಹೆ ನೀಡಿರುತ್ತಾರೆ.

೯) ೧೦ನೇ ತರಗತಿ ಮಕ್ಕಳಿಗೆ ಪ್ರತಿವರ್ಷ ಮಹಾನಗರ ಪಾಲಿಕೆಯಂದು ಶೈಕ್ಷಣಿಕ ಪ್ರವಾಸಕ್ಕಾಗಿ ಪರತಿಯೊಬ್ಬರಿಗೂ ರೂ.೩೦೦/- ನೀಡುತ್ತಾರೆ.

ಪ್ರತಿಯೊಬ್ಬರಿಗೂ ರೂ.25/- ರಂತೆ ಸಾದಿಲ್ವಾರು ಹಣವನ್ನು ಮಹಾನಗರ ಪಾಲಿಕೆಯಿಂದ ನೀಡುತ್ತಾರೆ.

ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖಾವತಿಯಿಂದ ತಲಾ ರೂ.೧೦೦/-ನ್ನು ವಿದ್ಯಾರ್ಥಿ ವೇತನವಾಗಿ ನೀಡಿರುತ್ತಾರೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಮಹಾನಗರ ಪಾಲಿಕೆಯಿಂದ ರೂ.೫೦೦/- ನ್ನು ಪ್ರೋತ್ಸಾಹಧನವಾಗಿ ನೀಡುತ್ತಾರೆ.

10) ನೌಕರರ ವೇತನವನ್ನು ಬಟವಾಡೆ ಪುಸ್ತಕದ ಪ್ರಕಾರ ವಿತರಿಸಲಾಗುವುದು, ವಿದ್ಯಾರ್ಥಿ ವೇತನ, ಪ್ರೋತ್ಸಾಹಧನ ಇವನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುವುದು.,

11) ಕಂಪ್ಯೂಟರ್ ಮತ್ತು ಜರಾಕ್ಸ್ ಮಿಷನ್‌ಗಳ ಲಭ್ಯವಿರುತ್ತವೆ.

12) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ಉಪಯೋಗಿಸುತ್ತಿಲ್ಲ.

13) ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾರೂ ಇರುವುದಿಲ್ಲ

14) ಇತರೆ ಮಾಹಿತಿ ಇದ್ದಲ್ಲಿ ಸೂಚನೆಯಂತೆ ಪಾಲಿಸಲಾಗುವುದು.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಾಲಕರ ಪ್ರೌಢಶಾಲೆ ಶ್ರೀರಾಮಪುರ (ಪಿಟ್ ಕಾಲೋನಿ) ಬೆಂಗಳೂರು –2

### ಮಂಜೂರಾದ / ಕಾರ್ಯನಿರ್ವಹಿಸುತ್ತಿರುವ / ಖಾಲಿ ಹುದ್ದೆಗಳ ವಿವರ

| ಕ್ರ ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಮುಖ್ಯೋಪಾಧ್ಯಾಯರು | 1 | 01 | – |
| 2 | ಸಹ ಶಿಕ್ಷಕರು (ಪಿಸಿಎಂ) | 1 | 01 | – |
| 3 | ಸಹ ಶಿಕ್ಷಕರು (ಸಿಬಿಜಡ್) | 1 | – | 01 |
| 4 | ಸಹ ಶಿಕ್ಷಕರು (ಕಲೆ) | 1 | 01 | – |
| 5 | ಸಹ ಶಿಕ್ಷಕರು (ಕನ್ನಡ) | 1 | – | 01 |
| 6 | ದೈಹಿಕ ಶಿಕ್ಷಕ ಶಿಕ್ಷಕರು | 1 | – | 01 |
| 7 | ತೋಟಗಾರಿಕೆ ಶಿಕ್ಷಕರು | 1 | – | 01 |
| 8 | ದ್ವತೀಯ ದರ್ಜೆ ಗುಮಾಸ್ತರು | 1 | 01 | – |
| 9 | ಪ್ರಯೋಗ ಶಾಲಾ ಸಹಾಯಕರು | 1 | 01 | – |
| 10 | ನಾಲ್ಕನೆ ದರ್ಜೆ ನೌಕರರು | 4 | 4 | – |
| 11 | ಪೌರಕಾರ್ಮಿಕರು | 1 | 1 | – |
| | **ಒಟ್ಟು** | **14** | **10** | **04** |